**ಓ.ಎಸ್.ನಂ :322/2022**

ಡಿ.ಡಬ್ಲ್ಯು :02

ದಿ. 30.08.2024 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ವಾದಿ ಪರ: ಶ್ರೀ ಜಿ ಎಸ್ ಎಸ್ ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾ ಸ್ವತ್ತು ಒಟ್ಟು 2 ಎಕರೆ 20 ಗುಂಟೆ ಇದೆ. ಅದು ಮೂಲತಃ ರೇವಣ್ಣ ಸಿದ್ದಪ್ಪ ರವರಿಗೆ ಸೇರಿದ ಸ್ವತ್ತು. ರೇವಣ ಸಿದ್ದಪ್ಪನ ಸ್ವಂತ ಊರು ದಾಸಿಕಟ್ಟೆ. ರೇವಣ ಸಿದ್ದಪ್ಪರವರಿಗೆ ಇಬ್ಬರು ಜನ ಹೆಂಡತಿಯರು ಮತ್ತು ನಾಲ್ಕು ಜನ ಮಕ್ಕಳು. ರೇವಣ ಸಿದ್ದಪ್ಪನ ಮಕ್ಕಳುಗಳಲ್ಲಿ ಒಬ್ಬರು ಹೊಳಲ್ಕೆರೆಯಲ್ಲಿ ವಾಸವಾಗಿದ್ದು, ಮತ್ತೊಬ್ಬ ಮೃತಪಟ್ಟಿದ್ದು, ಇನ್ನೊಬ್ಬ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ರೇವಣ ಸಿದ್ದಪ್ಪನಿಗೆ ದಾವಾ ಸ್ವತ್ತು ಹೇಗೆ ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ರೇವಣ ಸಿದ್ದಪ್ಪನ ಹೆಂಡತಿ ಮತ್ತು ಹೆಣ್ಣು ಮಕ್ಕಳುಗಳು ಹೊಳಲ್ಕೆರೆಯಲ್ಲಿ ವಾಸವಾಗಿದ್ದಾರೆ. ಅವರ ಹೆಸರು ಮತ್ತು ವಿಳಾಸಗಳು ನನಗೆ ಗೊತ್ತಿಲ್ಲ. ನಿಡಿ 6 ರ ದಾಖಲೆಯ ಸ್ವತ್ತಿನ ನೊಂದಾಯಿತ ಕ್ರಯಪತ್ರವನ್ನು ಮಾಡಿಕೊಡಬೇಕೆಂದು ರೇವಣ ಸಿದ್ದಪ್ಪ ರವರ ಮಕ್ಕಳು ಮತ್ತು ಹೆಂಡತಿಯರು ಯಾವುದೆ ದಾವೆಯನ್ನು ದಾಖಲಿಸಿರುವುದಿಲ್ಲ. ಅವರು ಯಾವುದೆ ಲೀಗಲ್ ನೋಟಿಸನ್ನು ಸಹ ಕಳುಹಿಸಿರುವುದಿಲ್ಲ. ಸಾಕ್ಷಿಯು ಸ್ವ ಇಚ್ಚೆಯಿಂದ ಊರಿನಲ್ಲಿಯೆ ಕರೆದು ವಿಚಾರಿಸಿರುತ್ತಾರೆಂದು ನುಡಿಯುತ್ತಾರೆ. ಶುದ್ದ ಕ್ರಯಪತ್ರವನ್ನು ಮಾಡಿ ಕೊಡಬೇಕೆಂದು ದಾವೆ ದಾಖಲಿಸಲು ಅವರಿಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಊರಿನಲ್ಲಿ ಕರೆದು ಕೇಳಿದಾಗ ಮಾಡಿಕೊಡುತ್ತೇವೆಂದು ತಿಳಿಸಿದ್ದರಿಂದ ದಾವೆ ದಾಖಲಿಸಿರುವುದಿಲ್ಲವೆಂದು ನುಡಿಯುತ್ತಾರೆ. ನಿಡಿ 6 ರ ದಾಖಲೆಗೆ ಸ್ಟ್ಯಾಂಪ್ ಶುಲ್ಕವನ್ನು ಮಾತ್ರ ಪಾವತಿಸಲಾಗಿದೆ ಎಂದರೆ ಸರಿಯಲ್ಲ. ಆದರೆ ಅದರ ದಂಡವನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 6 ರ ದಾಖಲೆಯಲ್ಲಿರುವ ರೇವಣ ಸಿದ್ದಪ್ಪ ರವರ ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿರುವ ರೇವಣ ಸಿದ್ದಪ್ಪ ರವರ ಸಹಿಗಳನ್ನು ನಾನೆ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ವಾದಿಗೆ ಸ್ವತ್ತು ಹರಾಜಿನಲ್ಲಿ ಬಂದ ನಂತರ ಅದನ್ನೆನಾದರೂ ಪ್ರಶ್ನಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಮಗೆ ಅವರಿಗೆ ಸ್ವತ್ತು ಹರಾಜು ಆದ ವಿಚಾರ ಗೊತ್ತಿರಲಿಲ್ಲವೆಂದು ನುಡಿಯುತ್ತಾರೆ.

ದಿನಾಂಕ 12.07.2018 ರಂದು ಸರ್ವೆ ಸ್ಕೆಚ್ ಮಾಡಿ ಸ್ವತ್ತನ್ನು ವಾದಿಗೆ ನೀಡಿರುತ್ತಾರೆಂದರೆ ಸರಿಯಲ್ಲ. ನ್ಯಾಯಾಲಯದ ಮೂಲಕ 11ಇ ಸ್ಕೆಚ್ ಅನ್ನು ಸಹ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯವು ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ಹೊರಡಿಸಿದ ನಂತರ ನಾನು ಮನೆಯನ್ನು ನಿರ್ಮಿಸಿರುತ್ತೇನೆಂದರೆ ಸರಿಯಲ್ಲ. ನಾನು ಮನೆಯನ್ನು ಸುಮಾರು 11 ವರುಷಗಳ ಹಿಂದೆ ನಿರ್ಮಿಸಿರುತ್ತೇನೆ. ನಾನು ಮನೆ ನಿರ್ಮಿಸಲು ಯಾವುದೆ ಪರವಾನಿಗೆಯನ್ನು ಪಡೆದುಕೊಂಡಿರಲಿಲ್ಲ. ನಮಗೆ ಜಾಗ ಬೇಕಾದರೆ ರೇವಣ ಸಿದ್ದಪ್ಪ ರವರ ಹೆಂಡತಿ ಮತ್ತು ಮಕ್ಕಳುಗಳ ಮೇಲೆ ದಾವೆ ಹೂಡಿ ಪಡೆದುಕೊಳ್ಳಬೇಕೆಂದರೆ ಸರಿಯಲ್ಲ. ಈ ದಾವೆಯ ವಿಚಾರ ರೇವಣ ಸಿದ್ದಪ್ಪ ರವರ ಮಕ್ಕಳಿಗೆ ತಿಳಿಸಿರುತ್ತೇನೆ. ಅವರು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ನಾನು ಸ್ಕೆಚ್ ಮಾಡಿಸಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೆ ತೊಂದರೆ ಇಲ್ಲ. ನಿಡಿ 6 ರ ದಾಖಲೆಯನ್ನು ಸೃಷ್ಟಿಸಿಕೊಂಡು ಸ್ವತ್ತು ನನಗೆ ಸೇರಿದ್ದು ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ಒಂದು ವೇಳೆ ನಿಡಿ 6 ರ ದಾಖಲೆಯು ನಿಜವಾದ ದಾಖಲೆಯಾಗಿದ್ದರೆ ಅದರ ಆಧಾರದ ಮೇಲೆ ನಾನು ನೊಂದಾಯಿತಿ ಕ್ರಯಪತ್ರವನ್ನು ಮಾಡಿಸಿಕೊಳ್ಳುತ್ತಿದ್ದೆ ಅದು ನಿಜವಾದ ದಾಖಲೆ ಆಗದೆ ಇದ್ದುದರಿಂದ ನಾನು ಯಾವುದೆ ಕ್ರಯಪತ್ರವನ್ನು ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗೆ ನ್ಯಾಯಾಲಯದ ಮೂಲಕ ಬಂದ ಸ್ವತ್ತಾಗಿದ್ದರಿಂದ ಅದರಲ್ಲಿ ನಮಗೆ ಯಾವುದೆ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಕುರಿಗಳು ಇವೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಬೇಲಿ ಹಾಕಿಕೊಂಡು ಕುರಿಗಳನ್ನು ಸಾಕಿಕೊಂಡು ಅದನ್ನು ವಾದಿಯೆ ಅನುಬವಿಸುತ್ತಿದ್ದು, ಇತ್ತಿಚೆಗೆ 2022 ರಲ್ಲಿ ನಾವು ದೌರ್ಜನ್ಯದಿಂದ ಆ ಸ್ವತ್ತನ್ನು ವಶಪಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಸುಮಾರು 25 ವರುಷಗಳಿಂದ ನಾನು ವಾಸವಾಗಿದ್ದು, ಆ ಬಗ್ಗೆ ನೀರು ಮತ್ತು ವಿದ್ಯುತ್‌ಚ್ಚಕ್ತಿಯ ಬಿಲ್ ಗಳು ನನ್ನ ಬಳಿ ಇವೆ. ಆ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸುತ್ತೇನೆ. ನಾವು ದೌರ್ಜನ್ಯದಿಂದ ವಾದಿಯ ಸ್ವತ್ತನ್ನು ಅತಿಕ್ರಮಣ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ರೇವಣ ಸಿದ್ದಪ್ಪ ನಮಗೆ ರಕ್ತ ಸಂಬಂದಿಯಲ್ಲ. ವಾದಿ ಮತ್ತು ನ್ಯಾಯಾಲಯದ ಮದ್ಯೆ ಆದ ವ್ಯವಹಾರಕ್ಕೂ ಹಾಗೂ ನಮ್ಮ ಮತ್ತು ರೇವಣ ಸಿದ್ದಪ್ಪನ ಮದ್ಯೆ ಆದ ವ್ಯವಹಾರಗಳಿಗೆ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

ರೇವಣ ಸಿದ್ದಪ್ಪ ಮೃತಪಟ್ಟು ಸಮಾರು 8–10 ವರುಷಗಳಾಗಿವೆ. ರೇವಣ ಸಿದ್ದಪ್ಪ ಮೃತಪಟ್ಟಿದ್ದು ಅವರ ಮಕ್ಕಳುಗಳು ಊರಿನಲ್ಲಿ ಇಲ್ಲದೆ ಇರುವುದನ್ನು ದುರುಪಯೋಗ ಪಡಿಸಿಕೊಂಡು ನಿಡಿ 6 ರ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊಳಲ್ಕೆರೆ